## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**6ನೇ ಅಡ್ಡ ರಸ್ತೆ,ಮಲ್ಲೇಶ್ವರಂ, ಬೆಂಗಳೂರು – 560003**

# ದ್ವಿತೀಯ/ ತೃತೀಯ ಹಾಗೂ ನಾಲ್ಕನೇ ಅಂಕಪಟ್ಟಿ ಪ್ರತಿಯನ್ನು ಪಡೆಯಲು ಮಾರ್ಗಸೂಚಿ

# Guidelines to obtain DPC/TPC & Fourth copy

1. ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿಯನ್ನು ಕಳೆದುಕೊಂಡ ಅಭ್ಯರ್ಥಿಯು ದ್ವಿತೀಯ, ತೃತೀಯ ಮತ್ತು ನಾಲ್ಕನೇ ಅಂಕಪಟ್ಟಿಗಾಗಿ ನಿಗಧಿತ ನಮೂನೆಯನ್ನು ಮಂಡಳಿ ವೆಬ್‌ಸೈಟ್ www.kseeb.kar.nic.inರಲ್ಲಿ ಅರ್ಜಿಯನ್ನು ಸೇವೆಗಳು (services) ಕಲಂ ರಲ್ಲಿ ಅಳವಡಿಸಲಾಗಿದ್ದು, down load ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
2. ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ನಂತರ ವ್ಯಾಸಂಗ ಮಾಡಿದ ಶಾಲೆಯಲ್ಲಿ ಶಾಲಾ ಮುಖ್ಯಶಿಕ್ಷಕರಿಂದ ಶಾಲೆಯ ಮೊಹರಿನೊಂದಿಗೆ ಮುಖ್ಯಶಿಕ್ಷಕರ ಸಹಿ ಪಡೆಯಬೇಕಾಗಿರುತ್ತದೆ.
3. ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ ಕಳೆದು ಹೋದ ಬಗ್ಗೆ ರೂ.20/–ಗಳ ಛಾಪಾ ಕಾಗದವನ್ನು ಇ–ಸ್ಟಾಂಪ್ ಮೂಲಕ First party ಅಭ್ಯರ್ಥಿ ಹೆಸರಿನಲ್ಲಿ Second party ಕೆ.ಎಸ್.ಇ.ಇ.ಬಿ ಹೆಸರಿನಲ್ಲಿ ಖರೀದಿಸಿ, ನ್ಯಾಯಾಲಯ / ನೋಟರಿಯವರಿಂದ ಅಫಿಡವಿಟ್ ಪಡೆದು ಸಲ್ಲಿಸಬೇಕು. ಸದರಿ ಅಪಿಡೆವಿಟ್‌ನಲ್ಲಿ ಯಾವ ಕಾರಣದಿಂದ ಕಳೆದು ಹೋಗಿದೆ ಎಂದು ಸ್ಪಷ್ಟಪಡಿಸಿರಬೇಕು. ಒಂದು ವೇಳೆ ಮೂಲ ಎಸ್.ಎಸ್.ಎಲ್.ಸಿ / ದ್ವಿತೀಯ / ತೃತೀಯ ಅಂಕಪಟ್ಟಿ ಸಿಕ್ಕಿದಲ್ಲಿ ಅದನ್ನು ಮಂಡಳಿಗೆ ಕಡ್ಡಾಯವಾಗಿ ಹಿಂದಿರುಗಿಸುತ್ತೇನೆ ಎಂದು ಪ್ರಮಾಣಿಕರಿಸಬೇಕು.
4. ಅಭ್ಯರ್ಥಿಯು ಅಪ್ರಾಪ್ತ ವಯಸ್ಕನಾಗಿದ್ದಲ್ಲಿ ಮಾತ್ರ ಪೋಷಕರ ಹೆಸರಿನಲ್ಲಿ ಕ್ರಮಸಂಖ್ಯೆ–3ರಲ್ಲಿ ತಿಳಿಸಿದಂತೆ ಅಫಿಡೇವಿಟ್ ಪಡೆಯಬೇಕು.
5. ಅಭ್ಯರ್ಥಿಯು ಅರ್ಜಿಯಲ್ಲಿ ಸಹಿ ಮಾಡಿದಂತೆ ಅಫಿಡೆವಿಟ್‌ನಲ್ಲಿಯು ಸಹಿ ಮಾಡಬೇಕು. ಅರ್ಜಿಯಲ್ಲಿಯೇ ಒಂದು ರೀತಿ ಅಪಿಡೆವಿಟ್‌ನಲ್ಲಿಯೇ ಒಂದು ರೀತಿ ಸಹಿ ಇರಕೂಡದು.
6. ಕೆಳಕಂಡಂತೆ ನಿಗಧಿತ ಶುಲ್ಕವನ್ನು ಸಾಮಾನ್ಯ ಹಾಗೂ ತುರ್ತು ಸೇವೆಗೆ ಯಾವುದು ಅಗತ್ಯವೋ ಅದಕ್ಕೆ NEFT ಚಲನ್ (ನಿರ್ದೇಶಕರು, ಪರೀಕ್ಷೆಗಳು) ಮೂಲಕ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಿ, ಮೂಲ ಬ್ಯಾಂಕ್ ಚಲನ್‌ನನ್ನು ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು.

**ಸರ್ಕಾರದ ಆದೇಶ ಸಂಖ್ಯೆ: ಇಡಿ 235 ಎಸ್‌ಎಲ್‌ಬಿ 2018 ಬೆಂಗಳೂರು ದಿನಾಂಕ: 21–01–2019ರನ್ವಯ ಈ ಕೆಳಕಂಡಂತೆ ಶುಲ್ಕವನ್ನು ಪರಿಷ್ಕರಿಸಲಾಗಿದೆ.**

| ಕ್ರ.ಸಂ | ವಿಷಯ | ನಿಗಧಿತ ಶುಲ್ಕ | | ಕಾಲಾವಧಿ (ಸಾರ್ವತ್ರಿಕ ರಜೆ ಹೊರತುಪಡಿಸಿ) | |
|---|---|---|---|---|---|
| | | ಸಾಮಾನ್ಯ ಸೇವೆ | ತುರ್ತು ಸೇವೆ | ಸಾಮಾನ್ಯ ಸೇವೆ | ತುರ್ತು ಸೇವೆ |
| 1 | ದ್ವಿತೀಯ ಅಂಕಟ್ಟಿ ಕ್ರೋಢೀಕೃತ ಅಂಕಪಟ್ಟಿ | 875/– | 1750 | 30 –ಕೆಲಸದ ದಿನಗಳು | 05 – ಕೆಲಸದ ದಿನಗಳು |
| 2 | ತೃತೀಯ ಅಂಕಪಟ್ಟ | 3500/– | 5250/– | 30 – ಕೆಲಸದ ದಿನಗಳು | 05 – ಕೆಲಸದ ದಿನಗಳು |
| 3 | ನಾಲ್ಕನೇ ಅಂಕಪಟ್ಟಿ | 5250/– | 8750/– | 30 – ಕೆಲಸದ ದಿನಗಳು | 05 – ಕೆಲಸದ ದಿನಗಳು |

- **ಸಂಬಂಧಿಸಿದ ಶಾಲಾ ಮುಖ್ಯಸ್ಥರು ಅಭ್ಯರ್ಥಿಯು ಸಲ್ಲಿಸಲಾದ ನಿಗಧಿತ ಅರ್ಜಿಯಲ್ಲಿ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು (ಮುಖ್ಯವಾಗಿ ಅಭ್ಯರ್ಥಿ ಮೊಬೈಲ್ ಸಂಖ್ಯೆ ಹಾಗೂ ಶಾಲಾ ಮುಖ್ಯಶಿಕ್ಷಕರ ಮೊಬೈಲ್ ಸಂಖ್ಯೆಯನ್ನು) ಶಿಫಾರಸ್ಸು ಮಾಡಿ ಮಂಡಳಿಗೆ ಕಳುಹಿಸತಕ್ಕದ್ದು.**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,**

**6ನೇ ಅಡ್ಡ ರಸ್ತೆ,ಮಲ್ಲೇಶ್ವರಂ, ಬೆಂಗಳೂರು – 560003**

## ಅನುತ್ತೀರ್ಣ ಅಂಕಪಟ್ಟಿ ಪ್ರತಿಯನ್ನು ಪಡೆಯಲು ಮಾರ್ಗಸೂಚಿ

# Guidelines to obtain Fail Marks Card

- ವಿದ್ಯಾರ್ಥಿಯು ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ತದನಂತರ ವ್ಯಾಸಂಗ ಮಾಡಿದ ಶಾಲಾ ಮುಖ್ಯಶಿಕ್ಷಕರಿಂದ ಶಾಲೆಯ ಮೊಹರಿನೊಂದಿಗೆ ಮುಖ್ಯಶಿಕ್ಷಕರ ಸಹಿ ಪಡೆಯಬೇಕಿರುತ್ತದೆ.
- ನಿಗಧಿತ ಶುಲ್ಕವನ್ನು NEFT ಚಲನ್ ಮೂಲಕ ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಮಂಡಳಿಗೆ ಪಾವತಿಸತಕ್ಕದ್ದು.
- ಸಂಬಂಧಿಸಿದ ಶಾಲಾ ಮುಖ್ಯಸ್ಥರು ಅಭ್ಯರ್ಥಿಯು ಸಲ್ಲಿಸಿದ ನಿಗಧಿತ ಅರ್ಜಿಯಲ್ಲಿ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು (ಮುಖ್ಯವಾಗಿ ಅಭ್ಯರ್ಥಿಯ ಮೊಬೈಲ್ ಸಂಖ್ಯೆ ಹಾಗೂ ಶಾಲಾ ಮುಖ್ಯಶಿಕ್ಷಕರ ಮೊಬೈಲ್ ಸಂಖ್ಯೆಯನ್ನು) ಶಿಫಾರಸ್ಸು ಮಾಡಿ ಸಂಬಂಧಿಸಿದ ವಿಭಾಗೀಯ ಕಛೇರಿ / ಮಂಡಳಿಗೆ ಕಳುಹಿಸತಕ್ಕದ್ದು.

## ಕ್ರೋಢೀಕೃತ ಅಂಕಪಟ್ಟಿ ಪಡೆಯಲು ಮಾರ್ಗಸೂಚಿ

# Guidelines to obtain Consolidated Marks Card

- 1999 ರ ಪೂರ್ವದಲ್ಲಿ ವಿದ್ಯಾರ್ಥಿಗಳು ಪ್ರಯತ್ನದಲ್ಲಿ ಉತ್ತೀರ್ಣರಾಗಿದ್ದು, ಅಂತಹ ವಿದ್ಯಾರ್ಥಿಗಳಿಗೆ ಮಂಡಳಿಯಿಂದ ಚಿಕ್ಕದಾದ (Statement of Marks) ನೀಡಲಾಗಿರುತ್ತದೆ. ಇದರಲ್ಲಿ ಜನ್ಮದಿನಾಂಕ ಮುದ್ರಿತವಾಗಿರುವುದಿಲ್ಲ.
- ಅಂತಹ ಅಭ್ಯರ್ಥಿಗಳು ಕ್ರೋಢೀಕೃತ ಅಂಕಪಟ್ಟಿ ಪಡೆಯಲಿಚ್ಛಿಸಿದಲ್ಲಿ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಈಗಾಗಲೇ ಪಡೆಯಲಾದ ಮೂಲ ಚಿಕ್ಕದಾದ Statement of Marks ರೊಂದಿಗೆ ಶಾಲಾ ಮುಖ್ಯಶಿಕ್ಷಕರ ಮುಖಾಂತರ ಅರ್ಜಿಯನ್ನು ಮಂಡಳಿಗೆ / ಸಂಬಂಧಿಸಿದ ವಿಭಾಗೀಯ ಕಛೇರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
- ನಿಗಧಿತ ಶುಲ್ಕವನ್ನು NEFT ಚಲನ್ ಮೂಲಕ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸತಕ್ಕದ್ದು.